ಕೊರೊನಾ ನಿಯಮ ಉಲ್ಲಂಘಿಸಿ ಪ್ರತಿಭಟನೆ ಸಿಎಂ ಸೇರಿ ಇತರ ನಾಯಕರಿಗೆ ಸುಪ್ರೀಂ ರಿಲೀಫ್

ಉದಯಕಾಲ ನ್ಯೂಸ್

ಬೆಂಗಳೂರು: ಕೊರೊನಾ ನಿಯಮಗಳನ್ನು ಉಲ್ಲಂಘಿಸಿ ಪ್ರತಿಭಟನೆ ನಡೆಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿ ಕಾಂಗ್ರೆಸ್‌ನ ಇತರ ನಾಯಕರಿಗೆ ಸುಪ್ರೀಂಕೋರ್ಟ್ ಬಿಗ್ ರಿಲೀಫ್ ನೀಡಿದೆ.

ಕಳೆದ 2022 ರಲ್ಲಿ ಕೊರೊನಾ ನಿಯಮಗಳನ್ನು ಉಲ್ಲಂಘಿಸಿ ಪ್ರತಿಭಟನೆ ನಡೆಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್‌ನ ಇತರ ನಾಯಕರ ವಿರುದ್ದ ದಾಖಲಾಗಿದ್ದ ಪ್ರಕರಣಕ್ಕೆ ಸುಪ್ರೀಂಕೋರ್ಟ್ ಮಧ್ಯಂತರ ತಡೆಯಾಜ್ಞೆ ನೀಡಿದೆ.

ಕೊರೊನಾ ನಿಯಮಗಳನ್ನು ಉಲ್ಲಂಘಿಸಿ ಪ್ರತಿಭಟನೆ ನಡೆಸಿದ್ದ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ಈ ಪ್ರಕರಣ ರದ್ದುಗೊಳಿಸುವಂತೆ ಸುಪ್ರೀಂಕೋರ್ಟ್‌ಗೆ ಕಾಂಗ್ರೆಸ್ ನಾಯಕರು ಅರ್ಜಿ ಸಲ್ಲಿಸಿದ್ದರು. ಬುಧವಾರ ಪ್ರಕರಣದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ಮಧ್ಯಂತರ ತಡೆಯಾಜ್ಞೆ ನೀಡಿ ವಿಚಾರಣೆ ಮುಂದೂಡಿದೆ.

ಏನಿದು ಪ್ರಕರಣ

ನ್ಯಾಷನಲ್ ಹೆರಾಲ್ಡ್ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ 2022ರಲ್ಲಿ ಜಾರಿ ನಿರ್ದೇಶನಾಲಯವು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರನ್ನು ವಿಚಾರಣೆಗೆ ಒಳಪಡಿಸಿತ್ತು. ಇದನ್ನು ವಿರೋಧಿಸಿ ರಾಜ್ಯ ಕಾಂಗ್ರೆಸ್ ಸಮಿತಿಯು 2022ರ ಜೂನ್‌ನಲ್ಲಿ ಪ್ರತಿಭಟನೆ ನಡೆಸಿತ್ತು. ಕರೋನಾ ನಿಯಮಗಳನ್ನು ಉಲ್ಲಂಘಿಸಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ನಾಯಕರು ಪ್ರತಿಭಟನೆ ಮಾಡಿದ್ದರು. ಹೀಗಾಗಿ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಐಸಿಎಸ್‌ಇ ಪರೀಕ್ಷೆ: ಹೋಲಿ ಏಂಜಲ್ಸ್ ವಿದ್ಯಾರ್ಥಿಗಳಿಂದ ಅಮೋಘ ಸಾಧನೆ

ಚಿನ್ಮಯಿ ಡಿ 96.40% | ಪೂರ್ಣಿಮ ಎಸ್ 96.40% | ಪ್ರತಿಷ್ಠ ಡಿ ಪರ್ಮಾರ್ 96.00% | ರಚನಾ ಆರ್ 95.00% | ಸೈದ ರಾಬಿಯಾ 94.80%

ಉದಯಕಾಲ ನ್ಯೂಸ್, ಬೆಂಗಳೂರು: ಬೆಂಗಳೂರಿನ ಹಂಪಿನಗರದ ಆರ್.ಪಿ.ಸಿ ಬಡಾವಣೆಯಲ್ಲಿರುವ ಹೋಲಿ ಏಂಜಲ್ಸ್ ಐಸಿಎಸ್‌ಇ ವಿಭಾಗದ 28 ವಿದ್ಯಾರ್ಥಿಗಳು ಐಸಿಎಸ್‌ಇ ಪರೀಕ್ಷೆಯಲ್ಲಿ ಅತ್ಯುತ್ತಮ ಫಲಿತಾಂಶ ಪಡೆಯುವ ಮೂಲಕ ಅಮೋಘ ಸಾಧನೆ ಮಾಡಿದ್ದಾರೆ. ಸಂಸ್ಥೆಯ ವಿದ್ಯಾರ್ಥಿಗಳಾದ ಚಿನ್ಮಯಿ ಡಿ ಶೇ.96.40., ಪೂರ್ಣಿಮ ಎಸ್ ಶೇ.96.40., ಪ್ರತಿಷ್ಠ ಡಿ.ಪರ್ಮಾರ್ ಶೇ.96.00., ರಚನಾ ಆರ್ ಶೇ.95.00., ಸೈದ ರಾಬಿಯಾ ಶೇ.94.80 ಸೇರಿ ಒಟ್ಟು 28 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿರುವುದಕ್ಕೆ ಹೋಲಿ ಏಂಜಲ್ಸ್ ಸಂಸ್ಥೆಯ ಪ್ರಾಂಶುಪಾಲರು ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದು, ಭವಿಷ್ಯದಲ್ಲಿ ಉನ್ನತಿ ಕಾಣಲಿ ಎಂದು ಸಂಸ್ಥೆಯ ಆಡಳಿತ ಮಂಡಳಿಯವರು ಶುಭಹಾರೈಸಿದ್ದಾರೆ.

ವಿಶ್ವಕ್ಕೆ ಬಸವಣ್ಣನವರ ಹಾಗೂ ಶಿವಶರಣರ ಸಂದೇಶಗಳು ಎಂದಿಗೂ ಪ್ರಸ್ತುತವಾದುವು: ಎಚ್.ಎಸ್.ರುದ್ರೇಶಮೂರ್ತಿ

ತಾಲೂಕು ಆಡಳಿತದಿಂದ ಬಸವ ಜಯಂತಿ ಆಚರಣೆ

ಉದಯಕಾಲ ನ್ಯೂಸ್

ದೇವನಹಳ್ಳಿ: ಏಕದೇವೋಪಾಸನೆ ಮೂಲಕ ಹೋಮ, ಹವನಗಳಿಗೆ ಕಡಿವಾಣ ಹಾಕಿ ದೇವಾಲಯ ಸಂಸ್ಕೃತಿಯನ್ನು ತೊಡೆದು ಪುರೋಹಿತಶಾಹಿಗೆ ತಡೆಯೊಡ್ಡಿದ ಶಿವಶರಣರ ಸಂದೇಶಗಳು ಎಂದಿಗೂ ಪ್ರಸ್ತುತವಾದುವು. ಕಾಯಕವನ್ನೇ ಕೈಲಾಸವನ್ನಾಗಿಸಿ ಕಾಯಕನಿಷ್ಠೆ, ದಾಸೋಹ ಎಂಬ ಭಾವನೆಯನ್ನು ಕಲಿಸಿಕೊಟ್ಟವರು ಬಸವಣ್ಣ. ಬಸವಾದಿ ಶಿವಶರಣರು 12 ನೇ ಶತಮಾನದಲ್ಲಿಯೇ ಮಾನವನಲ್ಲಿ ಹಂಚಿ ತಿನ್ನುವ, ಸರ್ವಸಮಾನತೆಯಿಂದ ಬದುಕುವ ಮೌಲ್ಯಗಳನ್ನು ಕಲಿಸಿಕೊಟ್ಟಿದ್ದಾರೆ. ಜಗದ ಉದ್ದಾರಕ್ಕೆ ಬಂದ ಬಸವಣ್ಣ ಸಾಗರದೊಳಗಿನ ಜ್ಯೋತಿಯಂತೆ. ಅಂದಿನ ಸಮಾಜದಲ್ಲಿನ ಅವಿದ್ಯಾವಂತರಿಗೂ ನಡೆ, ನುಡಿ ಕಲಿಸಿ ಉಣಲೂ, ಉಡಲೂ ಕಲಿಸಿದವರು. ಹುಟ್ಟಿನಿಂದ ಯೋಗ್ಯತೆಯನ್ನು ಅಳೆಯದೇ ಗುಣದಿಂದ ಅಳೆಯಬೇಕೆನ್ನುವ ಪರಿಕಲ್ಪನೆಗೆ ನಾಂದಿಯನ್ನಾಡಿದವರು ಶರಣರು ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಶರಣಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಎಚ್.ಎಸ್.ರುದ್ರೇಶಮೂರ್ತಿ ತಿಳಿಸಿದರು.

ಪಟ್ಟಣದ ತಾಲ್ಲ ಆಡಳಿತ ಸೌಧ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ, ತಾಲ್ಲೂಕು ವೀರಶೈವ ಸಮಾಜದ ಸಂಘದ ವತಿಯಿಂದ ಆಯೋಜಿಸಿದ್ದ ಬಸವಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿ ಶ್ರೇಣೀಕೃತ ಜನಸಮುದಾಯಗಳ ಮೇಲಿನ ಕ್ರಾಂತಿಯ ವಾಸ್ತವತೆಯು ವಚನಸಾಹಿತ್ಯದ ಮೇಲೆ ಬಿದ್ದುದರ ಪರಿಣಾಮವಾಗಿ ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ ಕ್ರಾಂತಿಯೇ ನಡೆಯಿತು. ಜಗತ್ತಿನಲ್ಲಿ ಮಾನವೀಯತೆಯನ್ನು ಪೋಷಿಸುವ ಮತ್ತು ರಕ್ಷಿಸುವ ಮಹಾಶಕ್ತಿಯು ನೈತಿಕತೆಯೊಂದಕ್ಕೆ ಮಾತ್ರ ಇದೆ. ಕಾಲ, ದೇಶಗಳ ವ್ಯಾಪ್ತಿಯನ್ನು ಮೀರಿ ವಿಶ್ವಮಾನವತೆ, ವಿಶ್ವಬಂಧುತ್ವ, ವಿಶ್ವಕಲ್ಯಾಣಗಳ ಸಂಗಮದ ಅದ್ಭುತ ಕನಸನ್ನು ನನಸಾಗಿಸಿದವರು ಶಿವಶರಣರು, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ವಿಕಾಸಕ್ಕೆ ಬಸವಣ್ಣನವರು ತೋರಿದ ಮಾರ್ಗ ಅನುಸರಿಸುವಂತಹದು ಎಂದರು.

ಸ್ವತಂತ್ರ ಧೀರವ್ಯಕ್ತಿಗಳಾಗಿಸಿದವರು: ನಿರಕ್ಷರಕುಕ್ಷಿಗಳಿಗೂ ಅಕ್ಷರದಾಸೋಹ ನೀಡಿ ಜಿಡ್ಡುಗಟ್ಟಿದ್ದ ಮಿದುಳಿನ ಅಜ್ಞಾನವನ್ನು ಕಳೆದು ವಿಚಾರಜ್ಯೋತಿಯನ್ನು ಬೆಳಗಿಸಿ ಸ್ವತಂತ್ರ ಧೀರ ವ್ಯಕ್ತಿಗಳನ್ನಾಗಿ ರೂಪಿಸಿದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ. ಪ್ರಪಂಚದಲ್ಲಿ ಎಷ್ಟೇ ಬಗೆಯ ಕ್ರಾಂತಿಗಳಾಗಿ ಹೋಗಿದ್ದರೂ 12 ನೇ ಶತಮಾನದಲ್ಲಿ ಕನ್ನಡನಾಡಿನಲ್ಲಿ ಆದ ನೈತಿಕ, ಸಮಾಜೋದ್ದಾರಕ ಧಾರ್ಮಿಕ ಕ್ರಾಂತಿಯು ಲೋಕಕ್ಕೆ ಮಾದರಿಯಾಗಿದೆ ಎಂದರು.

ತಾಲ್ಲೂಕು ತಹಸೀಲ್ದಾರ್ ಹೆಚ್. ಬಾಲಕೃಷ್ಣ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಷ್ಟೊಂದು ಅಪಾರ ಸಂಖ್ಯೆಯಲ್ಲಿ ವಚನಕಾರರು ಅಗಣಿತ ಸಂಖ್ಯೆಯಲ್ಲಿ ವಚನಗಳನ್ನು ಬರೆಯಲು ಸಾಧ್ಯವಾದುದು ಬಸವಣ್ಣನವರಿಂದ ಮಾತ್ರ. ಸನಾತನ ಶೃಂಖಲೆಗಲಿಂದ ಮಹಿಳೆಯರಿಗೆ ಮುಕ್ತಿ ಒದಗಿಸಿದುದು ಜಗತ್ತಿನ ಸಾಂಸ್ಕೃತಿಕ ಇತಿಹಾಸದಲ್ಲಿಯೇ ಅದ್ವಿತೀಯ ಘಟನೆ ಎಂದರು.

ಜಿಲ್ಲಾ ವೀರಶೈವ ಸಂಘದ ಮಾಜಿ ಅಧ್ಯಕ್ಷ ವಿರೂಪಾಕ್ಷಯ್ಯ ಮಾತನಾಡಿ, ಅಸಮಾನತೆ, ಮೌಢ್ಯತೆಯನ್ನು ಹೋಗಲಾಡಿಸಿ ಮೇಲು–ಕೀಳೆಂಬ ಭಾವನೆಯನ್ನು ತೊಲಗಿಸಿ, ಸಾಮಾಜಿಕ ಮತ್ತು ಸ್ತ್ರೀ ಸಮಾನತೆಗೆ ಒತ್ತು ಕೊಟ್ಟ ಶಿವಶರಣರ ಆದರ್ಶಗಳು ಸಾರ್ವಕಾಲಿಕ ಅನುಕರಣೀಯವಾದುವು. ದೇಶದ ಮೊಟ್ಟಮೊದಲ ಸ್ವತಂತ್ರ ವಿಚಾರವಾದಿಯಾಗಿ, ವಿಶ್ವಕ್ಕೆ ಅಧ್ಯಾತ್ಮಿಕ ಮತ್ತು ಧಾರ್ಮಿಕ ಸಮಾನತೆಯ ಕನ್ನಡ ನಾಡಿನ ರಾಯಭಾರಿಯಾಗಿ ಬಸವಣ್ಣನವರ ಕೊಡುಗೆ ಅಪಾರ ಎಂದರು.

ತಾಲ್ಲೂಕು ವೀರಶೈವ ಸಮಾಜದ ಸಂಘದ ಕಾರ್ಯದರ್ಶಿ ಪ್ರಸನ್ನಹಳ್ಳಿ ವಿಜಯಕುಮಾರ್, ರಾಜ್ಯ ಕಾರ್ಯಕಾರಿ ಸಮಿತಿಯ ಸದಸ್ಯ ಪ್ರಸನ್ನಹಳ್ಳಿ ವಿರೂಪಾಕ್ಷಯ್ಯ, ಪುರಸಭಾ ಸದಸ್ಯ ಕೋಡಿಮಂಚೇನಹಳ್ಳಿ ಎಸ್.ನಾಗೇಶ್, ಮಹಿಳಾ ನಿರ್ದೇಶಕಿ ಪುಷ್ಪಾವತಮ್ಮ, ಅಶ್ವಿನಿ, ದಾಕ್ಷಾಯಿಣಿ ಬಸವರಾಜು, ನಿರ್ದೇಶಕಿ ಎಂ. ಗಿರಿಜಾಂಬ, ಕೆ.ವೀರಭದ್ರಯ್ಯ, ಕೆ.ಸದಾಶಿವಯ್ಯ, ತಾಲ್ಲೂಕು ನಿರ್ದೇಶಕ ಕುಮಾರ್, ಸದಾಶಿವಯ್ಯ, ಎ.ಪಿ.ನಾಗೇಶ್, ಉಷಾ ಪೂರ್ಣಚಂದ್ರ, ನಳಿನಾಮಂಜುನಾಥ್, ಗಂಗಮ್ಮ, ಶೈಲಜಾ ವಿಜಯಕುಮಾರ್, ಕಾಂತರಾಜು, ಮಲ್ಲಿಕಾರ್ಜುನ್, ಮತ್ತಿತರರು ಇದ್ದರು.

'ಬಣಮಿ' ಕಥಾ ಸಂಕಲನಕ್ಕೆ ದಿವಂಗತ ಶ್ರೀ ಹೊಂಬಣ್ಣ ಪ್ರಶಸ್ತಿ



ಉದಯಕಾಲ ನ್ಯೂಸ್, ಬೆಂಗಳೂರು: ನಗರದ ಮಲ್ಲತ್ತಹಳ್ಳಿ ಬಾಲ ಗಂಗಾಧರನಗರದ 'ವಾಸುದೇವ ಚಾರಿಟಬಲ್ ಟ್ರಸ್ಟ್' ಕಥಾ ಸಾಹಿತ್ಯಕ್ಕೆ ನೀಡುವ 'ದಿವಂಗತ ಶ್ರೀ ಹೊಂಬಣ್ಣ ಪ್ರಶಸ್ತಿ'ಯನ್ನು 2024ನೇ ಸಾಲಿನಲ್ಲಿ ಪ್ರಕಟವಾದ ಕಪಿಲಾ ಪಿ.ಹುಮನಾಬಾದೆ ಅವರ 'ಬಣಮಿ' ಕಥಾಸಂಕಲನವನ್ನು ಆಯ್ಕೆ ಮಾಡಲಾಗಿದ್ದು, 2025 ಮೇ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಲು ನಿರ್ಧರಿಸಲಾಗುತ್ತದೆ ಎಂದು ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಚ್. ತುಕಾರಾಂ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಶಸ್ತಿಯು ಪ್ರಶಸ್ತಿ ಫಲಕ, 5 ಸಾವಿರ ರೂ.ನಗದು ಬಹುಮಾನ ಹೊಂದಿದ್ದು, ಸಾಹಿತ್ಯ ಕ್ಷೇತ್ರದಲ್ಲಿ ಬರಹಗಾರರಿಗೆ ಪ್ರೋತ್ಸಾಹಿಸಲು ನನ್ನ ತಂದೆ ಹೆಸರಿನಲ್ಲಿ ಪ್ರತಿವರ್ಷ ಈ ಪ್ರಶಸ್ತಿ ನೀಡಲು ವಾಸುದೇವ ಚಾರಿಟಬಲ್ ಟ್ರಸ್ಟ್ ವತಿಯಿಂದ ನಿರ್ಧರಿಸಿದ್ದೇವೆ ಎಂದು ತಿಳಿಸಿದ್ದಾರೆ.

2024ನೇ ಸಾಲಿನಲ್ಲಿ ಪ್ರಕಟವಾದ ಕಥಾ ಸಂಕಲನಗಳಲ್ಲಿ ಪ್ರಶಸ್ತಿಗೆ ಬಂದ ಕೃತಿಗಳನ್ನು ಆಯ್ಕೆ ಸಮಿತಿಯಲ್ಲಿನ ಉದಂತ ಶಿವಕುಮಾರ್ ಮತ್ತು ಎಂ.ಗಿರಿಯಪ್ಪ ಅವರು ಅವಲೋಕಿಸಿ ಕಪಿಲಾ ಪಿ.ಹುಮನಾಬಾದೆ ಅವರು ಬರೆದಿರುವ 'ಬಣಮಿ' ಕಥಾ ಸಂಕಲನವನ್ನು ಆಯ್ಕೆ ಮಾಡಿದ್ದು, ಅವರ ಶ್ರಮಕ್ಕೆ ಅಭಿನಂದನೆ ತಿಳಿಸುತ್ತೇವೆ ಎಂದು ಡಾ.ಎಚ್.ತುಕಾರಾಂ ತಿಳಿಸಿದ್ದಾರೆ.

ಬೆಂಗಳೂರು: ಬಸವೇಶ್ವರನಗರ ಬಸವ ಬಳಗದ ವತಿಯಿಂದ ಬುಧವಾರ ಬಸವೇಶ್ವರನಗರದಲ್ಲಿರುವ ಶ್ರೀ ಕಂಠಿ ಸಿದ್ದರಾಮಣ್ಣ ವಿದ್ಯಾರ್ಥಿ ನಿಲಯದಲ್ಲಿ ಬಸವ ಜಯಂತಿ ಉತ್ಸವ–2025 ಹಾಗೂ ತುಮಕೂರಿನ ತ್ರಿವಿಧ ದಾಸೋಹಿ ಡಾ.ಶಿವಕುಮಾರ ಮಹಾಸ್ವಾಮೀಜಿ ರವರ 118ನೇ ಜನ್ಮದಿನೋತ್ಸವ ಆಚರಣೆ.

ಬೆಂಗಳೂರು ನಾಗರಭಾವಿಯ ಕಲಾ ಗ್ರಾಮ ಸಭಾಂಗಣದಲ್ಲಿ ಪ್ರಜಾಕಿರಣ ಸೇವಾ ಚಾರಿಟೇಬಲ್ ಟ್ರಸ್ಟ್ (ರಿ.)ವತಿಯಿಂದ ಕನ್ನಡ ಮತ್ತು ಸಂಸ್ಕೃತ ಇಲಾಖೆ, ಕರ್ನಾಟಕ ಸರ್ಕಾರ ಸಹಕಾರದೊಂದಿಗೆ ಪರಮ ಪೂಜ್ಯ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿ ಅವರ 118ನೇ ವರ್ಷದ ಜಯಂತ್ಯೋತ್ಸವ'' ಜಗಜ್ಯೋತಿ ಬಸವ ಜಯಂತಿ, ಪದ್ಮಭೂಷಣ ಡಾ. ರಾಜ್ ಕುಮಾರ್ ರವರ 96ನೇ ವರ್ಷದ ಜಯಂತಿ ಅಂಗವಾಗಿ ವಿವಿಧ ಸಾಧಕರಿಗೆ ಬಸವ ಶ್ರೀ ಪ್ರಶಸ್ತಿ'' ಶಿವಕುಮಾರ ಸ್ವಾಮೀಜಿ ಪ್ರಶಸ್ತಿ'' ಹಾಗೂ ಡಾ. ರಾಜ್‌ಕುಮಾರ್ ಪ್ರಶಸ್ತಿ, ಆದರ್ಶ ದಂಪತಿ ಪ್ರಶಸ್ತಿ ಪ್ರಧಾನ ಸಮಾರಂಭ. ಬಸವ ಗಂಗೋತ್ರಿ ಆಶ್ರಮ ಕಸ್ತೂರಿ ಮಾತೆರವರಿಗೆ ಶ್ರೀ ಶಿವಕುಮಾರ ಮಹಾಸ್ವಾಮೀಜಿ ಪ್ರಶಸ್ತಿ ಮತ್ತು ಧರ್ಮದರ್ಶಿ ಡಾ.ಹೆಚ್.ಆರ್. ರವೀತೇಜರವರಿಗೆ ಬಸವ ಶ್ರೀ ಪ್ರಶಸ್ತಿ ಹಾಗೂ ಖ್ಯಾತ ಹಿನ್ನಲೆ ಗಾಯಕ ಶಶಿಧರ್ ಕೋಟೆರವರಿಗೆ ಡಾ.ರಾಜ್ ಕುಮಾರ್ ಪ್ರಶಸ್ತಿ, ಈ ಸಂಧರ್ಭದಲ್ಲಿ ದಾದಾಸಾಹೇಬ್ ಪಾಲ್ಕೆ ಸೇವಾರತ್ನ ಪ್ರಶಸ್ತಿ ಪುರಸ್ಕೃತರಾದ ಆದರ್ಶ ದಂಪತಿಗಳಾದ ಡಾಟಟ ನಂದಿನಿ ಪ್ರಕಾಶ್ ಹಾಗೂ ಡಾಟಟ ಪ್ರಕಾಶ್ ರವರಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು.